

ನೋಡ್ಬಿಡುವ ಬರ್ರೀ.

ಮಾತು–ಕತೆ ಜೋರಾಗಿ ನೆಡಿತೀತೆ ಕಾಣ್ತೇತ? ಈ ಎಲ್ಡು ಮನೆ ಜಗ್ಳ ಅಲ್ಲಿರ್ಲಿ, ಆ ನಡ್ಲುಮನೆ ನೋಡಿ ಎಂಗೆ ಪೆಕ್ರುಪೆಕ್ರಂಗೆ ಕಣ್ಬಿಡ್ಕಂಡು ಕೂತಿತೆ. ಮೊದ್ಲು ಇಂಗಿರ್ಲಿಲ್ಲ, ಎಲ್ಲಾರಿಗೂ ಒಪ್ವಂತದು ನ್ಯಾಯ್ವ ಎಂಗಾರ ಮಾಡಿ ಏಳದು. ಎಲ್ಡು ಮನೆ ಮಕ್ಳು ಸಂಸಾರ ತನ್ ಮನೇಲಿ ನೆಡಿತೀತೆ ಅಂತ ಬ್ಲಾಕ್ಮೇಲು ಮಾಡದು. ಆಗ ವಸಿ ಜಗ್ಳದ ಕಾವು ಏರಿರುವೇ ಮತ್ತೆ ಅವ್ರ ಮಕ್ಳು ಮೊಮ್ಮಕ್ಳು ಆಡದ್ನ ನೋಡ್ಕಂಡು ಎಂಗ ಅತ್ಲಾಗೆ ಕಡ್ಮೆಯಾಗದು, ಎಂಗ ನ್ಯಾಯ ಒಪ್ಪರು. ಆದ್ರೆ ಈಗ ಅಂಗೆಲ್ಲ ಆಗದಿಲ್ಲ. ನಮ್ಮನೆ ಆಸ್ತಿ–ಪಾಸ್ತೀನೆಲ್ಲಾ ಬಾಚ್ಕಳಕೇ ನಮ್ಮನೆ ಉಡ್ಗೀನ ಆರುಸ್ಕಂಡು ಓದ್ರಿ ಅಂತ ಬಲ್ಗಡೆ ಮನೆ, ನಮ್ಮುಡ್ಗ ಕಲ್ಗುಂಡಂಗೆ ಇದ್ದ. ಬಿಟ್ರೆ ಎಲ್ಲಾರ ಓಗ್ಬಿಟ್ಟಾನು ಅಂತ್ಲೆ ನಿಮ್ಮುಡ್ಗೀಗೆ ಏಳ್ಕೊಟ್ಟು ಚೂ ಬಿಟ್ಟಿದ್ರಿ ಅಂತ